ಶ್ರೀ ಬಿ ಎ. ಉಪ್ಪಿನ.—ಮಾನ್ಯ ಮಂತ್ರಿಗಳು ಪರಿಶೀಲನೆಯಲ್ಲಿದೆ ಹಾಗೂ ಕ್ರಮ ತೆಗೆದು ಕೊಳ್ಳುತ್ತೇವೆಂದರೆ ಅದನ್ನು ಈಗಲೇ ಏತಕ್ಕೆ ಘೋಷಣೆ ಮಾಡಬಾರದು ? ಶಿಕ್ಷಕರು ತೊಂದರೆಯಲ್ಲಿದ್ದಾರೆ. ಅವರಿಗೆ ಪರಿಷ್ಕೃತ ವೇತನ ಕೊಟ್ಟಿಲ್ಲ. ಅದನ್ನು ಕೊಡುತ್ತಾರೆಯೇ ಹೇಗೆ ಅವರನ್ನು ಖಾಯಂ ಮಾಡತಕ್ಕ ನಿರ್ಧಾರವನ್ನು ಎಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತಾರೆನ್ನುವ ಉತ್ತರವನ್ನು ಮಾನ್ಯ ಸಚಿವರಿಂದ ಖಚಿತವಾಗಿ ಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಶಿಕ್ಷಕರನ್ನು ಸ್ಥಳಾಂತರಿಸುವುದಿಲ್ಲ. ಅವರನ್ನು ಖಾಯಂ ಮಾಡತಕ್ಕ ಆಜ್ಞೆ ಹೊರಡಿಸತಕ್ಕ ನಿರ್ಧಾರವನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ.

## ಕೊಚರಿ ಏತ ನೀರಾವರಿ

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಹಿರಣ್ಯಕೇಶಿ ನದಿಯಿಂದ ಕೊಚರಿ ಯಾತ ನೀರಾವರಿ ಮಾಡುವುದಕ್ಕೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ವಿಷಯ ಏತ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ಆ ಕೆಲಸವನ್ನು ಬೇಗ ಮಾಡದಿದ್ದರೆ ಕಷ್ಟವಾಗುತ್ತದೆ. ಅಲ್ಲಿಯ ಜನರ ಪರಿಸ್ಥಿತಿ ಗಂಭೀರವಾಗಿದೆ. ಅದನ್ನು ಯಾವಾಗ ಮಾಡಿ ಸುತ್ತೀರಿ ?

ಶ್ರೀ ಎಚ್.ಡಿ. ದೇವೇಗೌಡ.—ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮಕ್ಕೆ ಈ ಯೋಜನೆಗಳನ್ನು ಕಳುಹಿಸಿಕೊಟ್ಟು ಆ ಕಡೆಯಿಂದ ಕೆಲಸವನ್ನು ತೆಗೆದುಕೊಳ್ಳತಕ್ಕ ಕೆಲವು ತೀರ್ಮಾನಗಳನ್ನು ಪೂರ್ವ ಭಾವಿಯಾಗಿ ತೆಗೆದುಕೊಳ್ಳುತ್ತಿದ್ದೇವೆ. ಈ ಯೋಜನೆಯನ್ನು ಸಹ ಏತ ನೀರಾವರಿ ಕಾರ್ಪೊರೇಷನ್ ಮುಖಾಂತರ ತೆಗೆದುಕೊಳ್ಳತಕ್ಕದ್ದು ನಮ್ಮ ಇಚ್ಛೆಯಿದೆ. ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಆರ್ಥಿಕ ನೆರವನ್ನು ಪಡೆದುಕೊಳ್ಳುವುದಕ್ಕೋಸ್ಕರ, ಈ ಸಂಸ್ಥೆಯನ್ನು ನಿರ್ಮಾಣ ಮಾಡಿದ್ದೇವೆ. ಈ ಯೋಜನೆಯನ್ನು ಆ ನಿಗಮಕ್ಕೆ ವಹಿಸಿ ಕೊಟ್ಟಿದ್ದೇವೆ. ಈ ಯೋಜನೆ ತೆಗೆದುಕೊಳ್ಳುವ ಬಗ್ಗೆ ನಬಾರ್ಡ್ ಮತ್ತು ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಹಣವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಈ ಯೋಜನೆ ಘಟಪ್ರಭ ಯೋಜನೆಯಡಿಯಲ್ಲಿ ಬರುತ್ತದೆ. ಕಳೆದ ಸಾರಿ ಈ ಯೋಜನೆ ಮಂಜೂರಾಗಿದೆ. ಹಣವನ್ನೂ ಸಹ ಬಿಡುಗಡೆ ಮಾಡಿದ್ದಾರೆ. ಅದು ಬಡ್ಜೆಟ್‌ನಲ್ಲಿ ಸಹ ಬಂದಿದೆ. ಇದನ್ನು ಏತ ನೀರಾವರಿ ಕಾರ್ಪೊರೇಷನ್ ಮುಖಾಂತರ ಪರಿಶೀಲನೆ ಮಾಡುತ್ತೇವೆಂದು ಜನರು ನಮ್ಮನ್ನೂ ಪರಿಶೀಲನೆ ಮಾಡುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಜನರು ಪರಿಶೀಲನೆ ಮಾಡುತ್ತಾರೆಂದರೆ, ಚುನಾವಣೆ ಸಂದರ್ಭದಲ್ಲಿ ನಮ್ಮನ್ನು ನಿಮ್ಮನ್ನು ಪರಿಶೀಲನೆ ಮಾಡುತ್ತಾರೆ. ಬಡ್ಜೆಟ್‌ನಲ್ಲಿ ನಾವು ಇಟ್ಟಿರತಕ್ಕ ಹಣ ಏನಿದೆ ಅದರ ಮೂರು ಪಟ್ಟು ಹಣವನ್ನು ಕೂಡಿಸಲಿಕ್ಕೆ ಅಂದರೆ ಶೇಕಡ ೭೫ ರಷ್ಟು ಹಣವನ್ನು ಹಣಕಾಸಿನ ಸಂಸ್ಥೆಗಳಿಂದ ಪಡೆದುಕೊಳ್ಳಬೇಕು. ಶೇಕಡ ೭೫ ರಷ್ಟು ಹಣವನ್ನು ಸರ್ಕಾರ ಮತ್ತು ರೈತರಿಂದ ಅಳವಡಿಸಿಕೊಂಡು, ಶೇಕಡ ೭೫ ರಷ್ಟು ಹಣವನ್ನು ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಹಣ ಪಡೆದುಕೊಳ್ಳುವುದಕ್ಕೆ ಏತ ನೀರಾವರಿ ಕಾರ್ಪೊರೇಷನ್ ರಚನೆ ಮಾಡಿದ್ದೇವೆ. ೨ ಕೋಟಿ ರೂಪಾಯಿ ಸೀಡ್‌ಮನಿ ಇಟ್ಟಿದ್ದೇವೆ ಅದನ್ನು ಕೊಡುವುದಕ್ಕೆ ಸರ್ಕಾರ ನಿರ್ಣಯ ಮಾಡಿದೆ. ನಾವು ೨ ಕೋಟಿ ಇಟ್ಟರೆ ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ೬ ಕೋಟಿ ರೂಪಾಯಿಗಳವರೆಗೂ ಹಣವನ್ನು ಪಡೆದುಕೊಳ್ಳು

ಬಹುದು. ಈ ಕೆಲಸಕ್ಕೆ ಹೆಚ್ಚು ಹಣವನ್ನು ಪಡೆದುಕೊಳ್ಳುವ ಆಶಾಭಾವನೆ ಹೊಂದಿದ್ದೇವೆ. ನಬಾರ್ಡ್ ಮತ್ತು ಇತರೆ ಹಣಕಾಸಿನ ಸಂಸ್ಥೆಗಳಿಂದ ಹೆಚ್ಚು ಹಣ ಪಡೆದುಕೊಂಡರೆ ಬೇಗ ಕೆಲಸ ಮುಗಿಸಬಹುದು. ಆ ಪ್ರಯತ್ನ ನಡೆಸುತ್ತಿದ್ದೇವೆ ಅದರಲ್ಲಿ ಸಫಲರಾಗುತ್ತೇವೆ.

## DISTRIBUTION OF MINIKITS TO FARMERS IN THE STATE

140 SRI B. S. YADIYURAPPA (Shikaripura).—Will the Hon'ble Agriculture Minister may kindly reply for the following questions ?

a) No. of minikits distributed to the farmers in the State free of cost during 1985-86 and 1986-87 (fertiliser, seeds etc). ?

b) In the same manner what is the amount spent for supply of P. P. Chemicals on subsidy (District—wise information to be furnished). ?

SRI R. V. DESHAPANDE (Minister for Agriculture).—

a) Only seed minikits are distributed to the farmers free of cost. No fertilisers are distributed. The details are as follows.

| Year | Number |
|---|---|
| 1985-86 | 71165 |
| 1986-87 | 90176 |

b) Amount spent for supply of plant protection chemicals to farmers on subsidy is as under.

| Year | Amount spent |
|---|---|
| 1985-86 | 1,30,69,901 |
| 1986-87 | 66,17,061 |

(Details are furnished in the Annexure)